ಅಕ್ಕಮ್ಮ ಅಪರಾಧಿಯಂತೆ ತಲೆ ತಗ್ಗಿಸಿ ಕುಳಿತಿದ್ದ. "ಎಲ್ಲೋದ ನಿನ್ನ ದೋಸ್ತಾ? ಪುಂಡಲೀಕನ ಅಂಗ್ಡೀಲಿ ತಿಂದ್ರಾ?" ಅನಂತ ತಲೆ ತೂಗಿದ. ಸಲೀಲತ್ತೆಯ ಜೋಲುವ ಹಿಂಡಿದ ಒಣ ವಸ್ತ್ರದಂತಹ ಶರೀರ ದರ್ಶನದ ರಾವಿನಿಂದ ಅನಂತ ಹೊರಗೆ ಬಂದಿರಲಿಲ್ಲ.

"ಈಗ ನನಗಿದ್ದದ್ದು ಒಂದೇ ಸೀರೆ; ಇನ್ನೊಂದ ಒರ್ಲೆ ತಿಂದು ಹಾಕ್ತು; 'ಅವ್ರು' ಹೋದ್ಮ್ಯಾಲೆ ಒಪ್ಪೊತ್ತೂಟ; ಅದೂ ಮಡಿ ಉಟ್ಟೇ ಮಾಡೂದು; ದಿನಾಲು ತೊಳದ್ರೆ ಬ್ಯಾಗ್ನೆ ಹರ್ದು ಹೋಗ್ತು; ಹೊಸಾದ ತಕಳಲೆ ದುಡ್ಡು ಬೇಕಲೊ... ನೀನು ನನ್ನ ದುಂಡಗೆ ನೋಡಿದ್ದು ಬ್ಯಾಜಾರಲ್ಲ; ನೀನು ನೋಡಿದ್ದು ಬ್ಯಾರೇನೆ..." ಸಲೀಲತ್ತೆ ಮಕ್ಕಳಂತೆ ಹಿಗ್ಗಿ ಹಿಗ್ಗಿ ಅತ್ತದ್ದನ್ನು ಈ ಮೊದಲು ಅನಂತ ಎಂದೂ ನೋಡಿರಲಿಲ್ಲ.

ಅನಂತ ಬಾಂಕಿನ ತುದಿಗೆ ಹೋಗಿ ಕೂತ; ಸಲೀಲತ್ತೆ ಒಳಗೆ ಕಸಬರಿಗೆಯಿಂದ ಮಣ್ಣು ನೆಲವನ್ನು ಜಪ್ಪುವ ಸಪ್ಪಳ ಕೇಳುತ್ತಿತ್ತು; ಹರಿದಾಡುತ್ತಿದ್ದ ಒರಲೆಗಳನ್ನು ಜಜ್ಜುತ್ತಿದ್ದಿರಬಹುದು; ಮನೆಯೊಳಗಿನ ನಿರ್ಜೀವ ನೀರವತೆ ಎಂದಿನಂತೆ ಇನ್ನೊಂದು ನಿರರ್ಥಕ ಮುಸ್ಸಂಜೆಯನ್ನು ಕಾಯುತ್ತಿತ್ತು.

ಕೆಲ ಸಮಯದ ನಂತರ ಅಂಗಳದಲ್ಲಿ ವರ್ಣಮಯ ಸಂಜೆ ಅರಳಿತು; ಮಳೆ ನೀರು ಇಂಗಿರಲಿಲ್ಲ; ಮತ್ತೆ ತುಂತುರು ಮಳೆ; ಅನಂತ ಹೊರಗೆ ಬಂದು ನಿಂತ; ಒಂದೊಂದೆ ಒರ್ಲೆ ಹುಳ ರೆಕ್ಕೆ ಪಡೆದು ಬಾಗಿಲ ಮೂಲಕ ಹಾರಿ ಬರತೊಡಗಿದವು; ಸಲೀಲತ್ತೆ ಕರೆದಂತೆ ಭಾಸವಾಗಿ ಅನಂತ ಜಗಲಿಗೆ ವಾಪಸ್ಸಾದ. ರೆಕ್ಕೆ ಮೂಡಿ ಹೊಸ ಜನ್ಮ ಪಡೆದು ಜಿಗಿದ ಸಾವಿರಾರು ಹುಳಗಳು ನಭೋಮಂಡಲವನ್ನು ಜಯಿಸುವಂತೆ ಜಗಲಿ ತುಂಬ ಹಾರಾಟ ನಡೆಸಿದ್ದವು; ಸಲೀಲತ್ತೆ ಸಂಹಾರದ ತಂತ್ರ ಬದಲಿಸಿ ಹೊಗೆ ಯುದ್ಧಕ್ಕೆ ಸಿದ್ಧಳಾಗಿದ್ದಳು; ಇಷ್ಟು ದಿನ ಅಗೋಚರವಾಗಿದ್ದ ಹುಳಗಳು ಮನೆಯ ಮೂಲೆ ಮೂಲೆಯಿಂದ ಸೈನಿಕರಂತೆ ಹೊರ ಬಂದು ಒಳಗೆ ಜಾಗ ಸಾಲದೆ ಹೊರಗೆ ಹಾರಿದವು; "ರಾಮ ರಾಮಾ ಇವುಗಳ ಅವತಾರವೆ" ಸಲೀಲತ್ತೆ ದೇಹದ ತುಂಬ ಹರಿದಾಡುತ್ತಿರುವ ಹುಳುಗಳನ್ನು ಕೊಡವಿಕೊಂಡಳು; ಹುಳುಗಳಿಗೆ ಶರಣಾಗಿ ಅವುಗಳಿಗೆ ಮನೆ ಬಿಟ್ಟು ಕೊಟ್ಟಂತೆ ಸಲೀಲತ್ತೆ ಮತ್ತು ಅನಂತ ಹೊರಗೆ ಬಂದರು; ಜಿನುಗು ಮಳೆ; ಜಾದು ಜೋಡು ರೆಕ್ಕೆಗಳನ್ನು ತೊಟ್ಟು ಪ್ರವೇಶಿಸಿದ ವಿಸ್ಮಯ ಪ್ರಪಂಚವೆ ಸ್ಮಶಾನವಾಗಿ ಹುಳುಗಳು ಹನಿಯ ಭಾರಕ್ಕೆ ವಿಮಾನ ಪತನವಾಗುವಂತೆ ನೆಲಕ್ಕುರುಳುತ್ತಿದ್ದವು; ರೆಕ್ಕೆ ಕಳಚಿದ ಬೆತ್ತಲ ಹುಳುಗಳನ್ನು ಕಾಗೆಗಳು ಕುಕ್ಕಿ ಕುಕ್ಕಿ ತಿನ್ನುತ್ತಿದ್ದವು; ಕ್ಷಣ ಮಾತ್ರದ ರೆಕ್ಕೆಯ ಸಂಭ್ರಮ ಸಾವಾಗಿ ಪರಿಣಮಿಸಿತ್ತು. ಸಲೀಲತ್ತೆ ಮನೆಯ ಮೇಲೆ ಹಾರುತ್ತಲೆ ಇರುವ ಹುಳುಗಳನ್ನು ಮೈಮರೆತು ನೋಡುತ್ತಿದ್ದಳು; ದತ್ತುನ ಸೈಕಲ್ ಕಾಣಿಸುತ್ತದೆಯೆ ಎಂದು ಅನಂತ ಇಣುಕಿ ನೋಡಿದ.

## ಶ್ರೀಧರ ಬಳಗಾರ

ಶ್ರೀಧರ ಬಳಗಾರ ಕನ್ನಡದ ವಿಶಿಷ್ಟ ದನಿಯ ಕತೆಗಾರ, ಕಾದಂಬರಿಕಾರ. ಸಹ್ಯಾದ್ರಿಯ ಕಾಡಿನ ಮಡಿಲಿನ ಊರಿನಲ್ಲಿ ನಡೆಯುವ ವಿದ್ಯಮಾನಗಳನ್ನು ಅದರ ನಿಗೂಢತೆ, ಜೀವಂತಿಕೆಗಳಿಂದ ಹಿಡಿಯುವ ಈ ಕತೆಗಾರನ ಕಥನ ಕಳೆದ ಮೂರು ದಶಕಗಳಲ್ಲಿ ತನ್ನದೇ ಓದುಗರನ್ನು ಸೃಷ್ಟಿಸಿಕೊಂಡಿದೆ. ಅವರು ಇದುವರೆಗೆ ಐದು ಕಥಾಸಂಕಲನ ('ಅಧೋಮುಖ', 'ಮುಖಾಂತರ', 'ಇಳೆ ಎಂಬ ಕನಸು', 'ಒಂದು ಫೋಟೋದ ನೆಗೆಟಿವ್', 'ಈಸಾಡತಾವ ಜೀವ'), ಮೂರು ಕಾದಂಬರಿ ('ಕೇತಕಿಯ ಬನ', 'ಆಡುಕಳ', 'ಮೃಗಶಿರ'), ಎರಡು ಅಂಕಣ ಬರಹ ('ರಥ ಬೀದಿ', 'ಕಾಲಪಲ್ಲಟ'), ಲೇಖನಗಳ ಸಂಗ್ರಹ ('ಮೊಳದಷ್ಟು ಹೂವು') ಪ್ರಕಟಿಸಿದ್ದಾರೆ.